**ಶಿಕ್ಷಕಿ:** ಗುಂಡ, ಸೀನಿಯರ್‌ಗೂ ಜೂನಿಯರ್‌ಗೂ ಇರುವ ವ್ಯತ್ಯಾಸವೇನು?

**ಗುಂಡ:** ಸಮುದ್ರದ ಹತ್ತಿರ ಇರುವವರು ಸೀನಿಯರ್, ಹಾಗೆಯೇ ಮೃಗಾಲಯದ ಹತ್ತಿರ ಇರುವವರು ಜೂನಿಯರ್ ಮೇಡಂ!

***

**ಶಿಕ್ಷಕ:** ವಿದ್ಯಾರ್ಥಿಗಳೇ, ಕತ್ತೆ ಇಲ್ಲಿ ಇಟ್ಟಿದ್ದ ನೀರನ್ನು ಮಾತ್ರ ಕುಡಿಯಿತು. ಆದರೆ ಅಲ್ಲಿಯೇ ಇದ್ದ ಸಾರಾಯಿಯನ್ನು ಕುಡಿಯಲಿಲ್ಲ. ಇದರಿಂದ ನೀವು ಏನನ್ನು ತಿಳಿದಿರಿ?

**ವಿದ್ಯಾರ್ಥಿಗಳು:** ಯಾರು ಸಾರಾಯಿ ಕುಡಿಯುವುಲ್ಲವೋ ಅವರೇ ಕತ್ತೆಗಳು ಸಾರ್!

***

**ರಮೇಶ:** ರಂಗ, ಇತ್ತೀಚೆಗೆ ಹುಡುಗಿಯರು ದೇವಸ್ಥಾನಕ್ಕೆ ಏಕೆ ಹೋಗ್ತಾರೆ?

**ರಂಗ:** ಒಳ್ಳೆಯ ಗಂಡ ಸಿಗಲಿ ಅಂತ!

**ರಮೇಶ:** ರಂಗ, ಮದುವೆಯಾದ ಮೇಲೂ ಹೋಗ್ತಾರೆ.

**ರಂಗ:** ದೇವರೇ, ನಾನು ಕೇಳಿದ್ದೇನೆ ನೀನು ಕೊಟ್ಟಿದ್ದೇನೆ? ಎಂದು ಮತ್ತೊಮ್ಮೆ ಹೇಳಿಕೊಳ್ಳುವುದಕ್ಕೆ!

***

**ಕಿಟ್ಟು:** ಗುಂಡ, ಒಂದು ವೇಳೆ ನಿನ್ನ ಗರ್ಲ್ ಫ್ರೆಂಡ್ ಹಾಗೂ ನಿನ್ನ ಬೆಸ್ಟ್ ಫ್ರೆಂಡ್ ದೋಣಿಯಲ್ಲಿ ಮುಳುಗುತ್ತಿದ್ದರೆ ಮೊದಲು ಯಾರನ್ನು ರಕ್ಷಿಸುತ್ತೀಯೆ?

**ಗುಂಡ:** ಯಾರನ್ನೂ ಕಾಪಾಡುವುದಿಲ್ಲ!

**ಕಿಟ್ಟು:** ಏಕೆ?

ಗುಂಡ: ಅವರಿಬ್ಬರಿಗೂ ಒಂದೇ ದೋಣಿಯಲ್ಲಿ ಏನು ಕೆಲಸ!?

***

**ಶಿಕ್ಷಕ:** ಖಾಲಿ ಇರುವ ತಲೆ ಇದ್ದರೆಷ್ಟು, ಬಿಟ್ಟರೆಷ್ಟು? ಇದೇ ರೀತಿ ಇರುವ ಇನ್ನೊಂದು ವಾಕ್ಯ ಹೇಳು ಗುಂಡ.

**ಗುಂಡ:** ಅರ್ಥವಾಗದ ಪಾಠ ಕೇಳಿದರೆಷ್ಟು, ಬಿಟ್ಟರೆಷ್ಟು?

***

**ಶಿಕ್ಷಕಿ:** ಪರಮೇಶಿ, ಜೀವನದಲ್ಲಿ ಏನು ಆಗಬೇಕು ಅಂದ್ಕೊಂಡಿದ್ದೀಯೆ?

**ಪರಮೇಶಿ:** ನಾನು, ನನ್ನ ತಂದೆಯಂತೆ ಡಾಕ್ಟರ್ ಆಗಬೇಕು ಅಂದ್ಕೊಂಡಿದ್ದೇನೆ.

**ಶಿಕ್ಷಕಿ:** ಹಾಗಾದರೆ, ನಿನ್ನ ತಂದೆ ಡಾಕ್ಟರಾ?

**ಪರಮೇಶಿ:** ಇಲ್ಲ, ಮೇಡಂ ಅವರು ಕೂಡ ಡಾಕ್ಟರ್ ಆಗಬೇಕು ಅಂದ್ಕೊಂಡಿದ್ರಂತೆ!

***




ಕ್ರಿಕೆಟ್ ಟೀಮಿಗೆ ಸೇರಿಸಿಕೊಳ್ಳಲು ಪ್ರಾಕ್ಟಿಸ್ ಮಾಡಿಸೋ ಹಾಗಿತ್ತು ಈ ಟೆಸ್ಟ್ ಮ್ಯಾಚ್!

**ಆತ:** ಏನ್ರಿ, ಬಾರ್‌ನಲ್ಲಿ ಚೆನ್ನಾಗಿ ಕುಡಿದು ಅಳ್ತಾ ಕುಳಿತಿದ್ದೀರಲ್ಲ ಏಕೆ?

**ಈತ:** ಹುಡ್ಗೀನ ಮರೆಯಬೇಕು ಅಂತ ಕುಡಿದೆ, ಆದರೆ ಆ ಹುಡುಗಿ ಯಾರು ಅಂತ ನೆನಪಾಗ್ತಾ ಇಲ್ಲ!

***

**ಕವಿತಾ:** ಅಲ್ಲ ಪಂಕಜ, ನಿನ್ನ ತಲೆ ಕೂದಲು ಯಾವಾಗಲೂ ದಟ್ಟವಾಗಿಯೇ ಇರುತ್ತಲ್ಲ ಏನು ಮಾಡ್ತೀಯೆ?

**ಪಂಕಜ:** ಏನು ಇಲ್ಲ, ಬೆಳಗ್ಗೆ ಶಾಂಪು ಹಾಕಿ ಸ್ನಾನ ಮಾಡಿದ ಮೇಲೆ ಸಂಜೆ ಹೇರ್ ಆಯಿಲ್ ಹಚ್ಚುತ್ತೇನೆ.

**ಕವಿತಾ:** ರಾತ್ರಿ?

**ಪಂಕಜ:** ತಲೆಯಿಂದ ಕಳಚಿ ಒಂದು ಕಡೆ ಇಡುತ್ತೇನೆ!

***

**ಆತ:** ಡಾಕ್ಟ್ರೇ, ನೀವೇನೋ ಕುಡಿಯೋದನ್ನು ಬಿಡಿಸಿ ಒಳ್ಳೆಯದನ್ನೇ ಮಾಡಿದ್ದೀರಿ, ಈಗ ಮತ್ತೆ ಕುಡಿಯೋ ಪರಿಸ್ಥಿತಿ ಬಂದು ಬಿಟ್ಟಿದೆ!

**ಡಾಕ್ಟರ್:** ಏಕೆ ಹೀಗೆ ಹೇಳ್ತಾ ಇದ್ದೀರಿ, ಏನು ಅಂಥ ಪರಿಸ್ಥಿತಿ?

**ಆತ:** ಏನು ಹೇಳೋದು ಡಾಕ್ಟರೇ ನಿಮ್ಮ ನರ್ಸನ್ನು ಮರೆಯೋದಕ್ಕೆ ಆಗ್ತಾ ಇಲ್ಲ!

***

**ಡಾಕ್ಟರ್:** ನಿಮ್ಮ ಹೆಂಡತಿ ಬಗ್ಗೆ ಏನು ಚಿಂತೆ ಮಾಡಬೇಡಿ. ನೀವು ಖಂಡಿತ ಹೊಸ ಬಗೆಯ ಹೆಣ್ಣನ್ನೇ ನೋಡ್ತೀರಿ!

**ಆತ:** ಹೌದಾ ಡಾಕ್ಟ್ರೇ, ಹಾಗಾದರೆ ಮೊದಲಿನ ಹೆಂಡತಿ!?

***

**ನ್ಯಾಯಾಧೀಶ:** ನೀನು ಎರಡು ಮದುವೆ ಆಗಿರುವುದರ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದಿರುವುದರಿಂದ ನಿನ್ನನ್ನು ಬಿಡುಗಡೆ ಮಾಡುತ್ತಿದ್ದೇವೆ!

**ಅಪರಾಧಿ:** ಹೌದಾ ಸ್ವಾಮಿ, ಹಾಗಾದರೆ ನಾನು ಮೊದಲಿನ ಹೆಂಡತಿ ಮನೆಗೆ ಹೋಗೋದೋ, ಇಲ್ಲ ಎರಡನೆಯ ಹೆಂಡತಿ ಮನೆಗೆ ಹೋಗೋದೋ?

***

**ವರನ ತಂದೆ:** ನಿಮ್ಮ ಮಗಳು ನಮ್ಮ ಮನೆಯನ್ನು ಚೆನ್ನಾಗಿ ಇಟ್ಟುಕೊಳ್ಳುತ್ತಾಳೆ ಅಂತ ಯಾವ ಆಧಾರದ ಮೇಲೆ ಹೇಳಿದ್ರಿ?

**ವಧುವಿನ ತಂದೆ:** ನಮ್ಮ ಮಗಳು ಇಂಟೀರಿಯರ್ ಡೆಕೋರೇಟರ್ ಆಗಿದ್ದಾಳೆ!

***

**ಪರಮೇಶಿ:** ರಂಗ ನಮ್ಮ ತಂದೆಗೆ ಬಂದೂಕಿನ ಶಬ್ದ ಎಂದರೆ ಬಹಳ ಭಯ.

**ರಂಗ:** ನಮ್ಮ ತಂದೆಗೆ ಹೃದಯದ ಬಡಿತವೆಂದರೇನೇ ಭಯ!

**ಪರಮೇಶಿ:** ಹೌದಾ, ಹಾಗಾದರೆ ನಿಮ್ಮ ತಂದೆ ಕೆಲಸ ಏನು?

**ರಂಗ:** ಡಾಕ್ಟರ್, ನಿಮ್ಮ ತಂದೆ ಕೆಲಸ?

ಪರಮೇಶಿ: ಪೊಲೀಸ್ ಆಫೀಸರ್!

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ




ಶ್ರೀ ಆದಿಶಕ್ತಿ ಜ್ಯೋತಿಷ್ಯ ಪೀಠಂ
Your all problems 100% solutions
ಪ್ರಧಾನ ತಾಂತ್ರಿಕ್ ಶ್ರೀ ರಾಘವೇಂದ್ರ ಶರ್ಮ ಗುರೂಜಿ
ತಮ್ಮ ಅತ್ಯುನ್ನತ ಜ್ಯೋತಿಷ್ಯ ಜ್ಞಾನದಿಂದ ಸಕಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡುತ್ತಾರೆ.
ದೈವಪ್ರಶ್ನೆ, ಅಷ್ಟಮಂಗಲ ಪ್ರಶ್ನೆ, ಅಂಜನಪ್ರಶ್ನೆ ನೋಡಿ ಸಂಪೂರ್ಣ ಭವಿಷ್ಯ ತಿಳಿಸುತ್ತಾರೆ.
ಧನವಶ, ಜನವಶ, ಭೂಮಿವಶ, ಶತ್ರುನಾಶ, ಕೋರ್ಟ್-ಕೇಸ್, ಪ್ರೀತಿಯಲ್ಲಿ ನಂಬಿಮೋಸ, ಇಷ್ಟಪಟ್ಟವರು ನಿಮ್ಮಂತೆ ಆಗಲು, ಸ್ತ್ರೀ-ಪುರುಷ ವಶೀಕರಣ, ಇನ್ನು ಸಮಸ್ಯೆ ಏನೇ ಇದ್ದರು ಕೇರಳದ ಕೊಳ್ಳೇಗಾಲದ ಅಥರ್ವಣ ಬ್ರಹ್ಮ ತಂತ್ರದಲ್ಲಿ ವಿದ್ಯೆಯಿಂದ ಕೇವಲ 2 ದಿನದಲ್ಲಿ 100% ಪರಿಹಾರ ಶತಃಸಿದ್ಧ,
ನಮಗಿಂತ ಮೊದಲು ಬೇರೆಯಾರೆ ಪರಿಹಾರ ಮಾಡಿ ಕೊಟ್ಟಲ್ಲಿ ಸೂಕ್ತ ಬಹುಮಾನ ನೀಡಲಾಗುತ್ತದೆ.
ವಿ.ಸೂ: ಸ್ತ್ರೀಯರಿಗೆ ಫೋನಿನ ಮೂಲಕ ನೇರ ಪರಿಹಾರ ನೀಡುತ್ತಾರೆ
ವಿಳಾಸ: ಶ್ರೀ ಬಂಡೇ ಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವಿಪುರಂ ಗುಟ್ಟಹಳ್ಳಿ, ಬೆಂಗಳೂರು
9620201188